# ಮಕ್ಕಳ ಹಕ್ಕುಗಳು ವಸ್ತುಸ್ಥಿತಿ–ಸವಾಲು ಸಾಧ್ಯತೆಗಳು

**ಲೇಖನ:-ಡಾ.ರಾಜೇಂದ್ರ ಪ್ರಸಾದ್.ಪಿ**
**ರಿಸರ್ಚ್ ಫೆಲೋ–ಗ್ರಾಮ್**

**"ಎಲ್ಲಾ ಮಕ್ಕಳಿಗೂ ಎಲ್ಲಾ ಹಕ್ಕುಗಳು ಎಂಬ ತತ್ವ ಇಂದಿಗೂ ವಾಸ್ತವತೆಯಿಂದ ಬಹುದೂರವೇ ಉಳಿದಿದೆ." – ಕೋಫಿಅನ್ನಾನ್**

ವಿಶ್ವ ಸಂಸ್ಥೆ ಮಕ್ಕಳ ಹಕ್ಕುಗಳನ್ನು ಘೋಷಿಸಿತು. ಹಕ್ಕುಗಳ ಘೋಷಣೆಯ ಹಿನ್ನಲೆಯಲ್ಲಿ ಹಲವಾರು ಸಮಾವೇಶಗಳು, ಒಪ್ಪಂದಗಳು ನಡೆದವು. ಮಕ್ಕಳು ಮತ್ತು ಮಕ್ಕಳ ಸ್ವಾತಂತ್ರ್ಯ ಮತ್ತು ಗೌರವದ ಹಕ್ಕನ್ನು ರಕ್ಷಿಸುವ ಪ್ರಾಮುಖ್ಯತೆ ಕುರಿತು ಈಗ ಒಮ್ಮತವಿದೆ. ಇದನ್ನು ಭಾರತ ಸಂವಿಧಾನದಲ್ಲಿ ಮಾನ್ಯ ಮಾಡಲಾಗಿದೆ. ಇದೆಲ್ಲದರ ಹೊರತಾಗಿಯೂ ಸ್ವಾತಂತ್ರ್ಯ ದೊರೆತಾಗಿನಿಂದಲೂ ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳು ಅವ್ಯಾಹತವಾಗಿ ನಡೆದಿವೆ ಮತ್ತು ಮಕ್ಕಳಿಗೆ ಮೀಸಲಾಗಿರುವ ಸೇವಾಸೌಲಭ್ಯಗಳ ಪೂರೈಕೆಯಲ್ಲಿ ಗಂಭೀರವಾದ ಲೋಪಗಳಾಗಿವೆ.

2011ರ ಜನಗಣತಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 0 ಯಿಂದ 18 ವರ್ಷದ ಮಕ್ಕಳ ಸಂಖ್ಯೆ 20.73 ಮಿಲಿಯನ್ ಇದರಲ್ಲಿ 0–3 ವಯೋಮಾನದೊಳಗಿನ 2.96 ಮಿಲಿಯನ್ ಮಕ್ಕಳಿದ್ದು. 3 ರಿಂದ 6 ವಯೋಮಾನದ ಮಕ್ಕಳ ಸಂಖ್ಯೆ 3.17ಮಿಲಿಯನ್ ರಷ್ಟಿದ್ದಾರೆ. 6 ರಿಂದ 14 ವರ್ಷದ ವಯೋಮಾನದೊಳಗಿನ ಮಕ್ಕಳ ಸಂಖ್ಯೆ 8.75 ಮಿಲಿಯನ್ ರಷ್ಟಿದ್ದು. 14ರಿಂದ 18 ವರ್ಷದ ವಯೋಮಾನದ ಮಕ್ಕಳ ಸಂಖ್ಯೆ 5.84ಮಿಲಿಯನ್ ರಷ್ಟಿದ್ದಾರೆ.

ಇಂದು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ 36 ರಷ್ಟು ಮಕ್ಕಳೇ ಆಗಿದ್ದಾರೆ. ಮಕ್ಕಳಿಗೆ ರಕ್ಷಣೆ ನೀಡಬೇಕು ಎಂಬುದಷ್ಟೇ ಅಲ್ಲ. ಅವರು ರಾಜ್ಯದ ಭವಿಷ್ಯದ ಗುಣಮಟ್ಟದ ನಾಗರೀಕರಾಗಿ ರಾಜ್ಯ ಮತ್ತು ದೇಶ ಕಟ್ಟುವ ಅಗತ್ಯ ಇದೆ. ವಿವಿಧ ಸಂಶೋಧನೆಗಳು ತಿಳಿಸುವ ಹಾಗೆ ಪೌಷ್ಟಿಕತೆ, ಆರೋಗ್ಯವು ಮಗುವಿನ ಅರಿವಿನ ಬೆಳವಣಿಗೆ ಹಾಗೂ ಶೈಕ್ಷಣಿಕ ಸಾಧನೆಗೆ ಪೂರಕವಾಗುತ್ತದೆ. ಶಾಲಾಪೂರ್ವ ಮತ್ತು ಶಾಲೆಯ ಗುಣಮಟ್ಟ ಮಗುವಿನ ಬೆಳವಣಿಗೆಯಲ್ಲಿ ಗಮನಾರ್ಹವಾದ ಪಾತ್ರಗಳನ್ನು ವಹಿಸುತ್ತವೆ. ಈಗಿದ್ದರೂ ಅಂಕಿ ಅಂಶಗಳು ಬೇರೆಯದೇ ಕಥೆ ಹೇಳುತ್ತವೆ. ಅವೆಂದರೆ.

ಮಹಿಳೆ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಭಾರತ ಸರ್ಕಾರದ ಸಚಿವಾಲಯವು 2007 ರಲ್ಲಿ ಮಗುವಿನ ದುರ್ಬಳಕೆ ಎಂಬ ವಿಷಯದ ಮೇಲೆ ಮಾಡಿದ ಒಂದು ಅಧ್ಯಯನದ ಪ್ರಕಾರ ಮಕ್ಕಳ ವಿವಿಧ ರೀತಿಯ ದುರ್ಬಳಕೆಗಳಲ್ಲಿ 5ರಿಂದ 12 ವರ್ಷದ ವಯೋಮಾನದವರು ಅತಿ ಹೆಚ್ಚಿನ ದುರ್ಬಳಕೆ ಮತ್ತು ಶೋಷಣೆಗೆ ಗುರಿಯಾಗುವ ಅಪಾಯವಿದೆ ಎಂದು ತಿಳಿದು ಬಂದಿದೆ. ದುರ್ಬಳಕೆಯು ದೈಹಿಕ,ಲೈಂಗಿಕ ಜೊತೆಜೊತೆಗೆ ಭಾವನಾತ್ಮಕವೂ ಆಗಿರುವುದು. ಈ ಅಧ್ಯಯನವು ಹಲವು ವಾಸ್ತವಾಂಶಗಳ ಮೇಲೆ ಬೆಳಕು ಚೆಲ್ಲುವುದು. ಅವುಗಳೆಂದರೆ ದೈಹಿಕ ದುರ್ಬಳಕೆಯಲ್ಲಿ: ಪ್ರತಿ ಮೂರು ಮಕ್ಕಳಲ್ಲಿ ಎರಡು ಮಕ್ಕಳು ದೈಹಿಕ ದುರ್ಬಳಕೆಗೆ ಒಳಗಾಗುತ್ತಿರುವುದು. ದೈಹಿಕ ದುರ್ಬಳಕೆಗೆ ಒಳಗಾದ ಶೇಕಡ 69 ರಷ್ಟು ಮಕ್ಕಳಲ್ಲಿ 54.68 ರಷ್ಟು ಗಂಡು ಮಕ್ಕಳಾಗಿದ್ದಾರೆ. ಒಂದಲ್ಲ ಒಂದು ರೀತಿಯ ದೈಹಿಕ ದುರ್ಬಳಕೆಗೆ ಶೇಕಡ 50 ಗಿಂತಲೂ ಹೆಚ್ಚು ಮಕ್ಕಳು ಒಳಗಾಗಿರುವವರು. ದೈಹಿಕ ದುರ್ಬಳಕೆಗೆ ಒಳಗಾದ ಇವರಲ್ಲಿ ಶೇಕಡ 88.6ರಷ್ಟು ಜನರು ಕೌಟುಂಬಿಕ ಪರಿಸರದಲ್ಲೇ ತಾಯಿ ತಂದೆಯರಿಂದ ದೈಹಿಕ ದುರ್ಬಳಕೆಗೆ ಗುರಿಯಾಗಿರುವವರು. ಲೈಂಗಿಕ ದುರ್ಬಳಕೆಯಲ್ಲಿ: ಶೇಕಡ 52.22 ರಷ್ಟು ಮಕ್ಕಳು ಒಂದಲ್ಲ ಒಂದು ರೀತಿಯ ಲೈಂಗಿಕ ದುರ್ಬಳಕೆಗೆ ಒಳಗಾಗಿರುವರು. ಶೇಕಡ 21.9 ರಷ್ಟು ಪ್ರತಿಕ್ರಿಯಿಸಿದ ಮಕ್ಕಳು ತೀವ್ರವಾದ ಲೈಂಗಿಕ ದುರ್ಬಳಕಕ್ಕೆ ಒಳಗಾಗಿದ್ದಾರೆ ಮತ್ತು ಶೇಕಡ 50.76 ರಷ್ಟು ಮಕ್ಕಳು ಇತರ ರೀತಿಯ ಲೈಂಗಿಕ ದುರ್ಬಳಕೆ ಅನುಭವಿಸುವರು. ಶೇಕಡ 50ರಷ್ಟು ಮಕ್ಕಳಿಗೆ ಅವರಿಗೆ ಗೊತ್ತಿರುವ, ವಿಶ್ವಾಸಿಕ ಮತ್ತು ಹೊಣೆಗಾರ ವ್ಯಕ್ತಿಗಳಿಂದಲೆ ದುರ್ಬಳಕೆಯಾಗಿದೆ.

ಮಾದರಿ ನೊಂದಣಿ ವ್ಯವಸ್ಥೆ (ಎಸ್.ಆರ್.ಎಸ್) 2011ರ ರಾಜ್ಯದ ಶಿಶುಮರಣ ದರ 35 ರಷ್ಟಿದ್ದು , ಎಸ್.ಆರ್.ಎಸ್ 2007–09 ರ ಪ್ರಕಾರ ತಾಯಂದಿರ ಮರಣ ಪ್ರಮಾಣ 178 ರಷ್ಟಿದೆ. 2011ರ ಜನಗಣತಿಯ ಪ್ರಕಾರ ಮಕ್ಕಳ ಲಿಂಗ ಅನುಪಾತವು 943 ಇದೆ. ವಿಕಲಚೇತನರ ಅಭಿವೃದ್ಧಿ ಇಲಾಖೆಯ 2006–07 ರ ಸಮೀಕ್ಷೆ ಪ್ರಕಾರ 0–19 ವಯೋಮಾನದೊಳಗಿನ ವಿಕಚೇತನ ಮಕ್ಕಳ ಸಂಖ್ಯೆ 3.45 ಲಕ್ಷ ಇದರಲ್ಲಿ ಬಾಲಕರು 1.92 ಲಕ್ಷ ಇದ್ದರೆ, ಬಾಲಕಿಯರ ಸಂಖ್ಯೆ 1.53 ರಷ್ಟಿದ್ದಾರೆ.

ರಾಷ್ಟ್ರೀಯ ಮಾದರಿ ಸಮೀಕ್ಷೆ ಜನವರಿ 2014ರ ವರದಿ ತಿಳಿಸುವಂತೆ ರಾಜ್ಯದ 5 ರಿಂದ 14 ವಯೋಮಾನದದೊಳಗಿನ ಗ್ರಾಮೀಣಭಾಗದಲ್ಲಿ ಪ್ರತಿ 1000 ಮಕ್ಕಳಿಗೆ 30ಮಕ್ಕಳು ಹಾಗೂ ನಗರ ಪ್ರದೇಶಗಳಲ್ಲಿ 1000 ಮಕ್ಕಳಿಗೆ 6 ಮಕ್ಕಳು ಬಾಲಕಾರ್ಮಿಕರಾಗುತ್ತಿದ್ದಾರೆ ಎಂಬುದನ್ನು ವರದಿಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್–3) ಯ ಆಧಾರದಂತೆ  ಐದು ವರ್ಷ ವಯೋಮಾನದೊಳಗಿನ ಶೇಕಡ 42.5ರಷ್ಟು ಮಕ್ಕಳು ವಯಸ್ಸಿಗೆ ಹೊಂದಿರಬೇಕಾದ ತೂಕಕ್ಕಿಂತ ಕಡಿಮೆ ತೂಕ ಹೊಂದಿದ್ದಾರೆ. ಶೇಕಡ 48 ರಷ್ಟು ಮಕ್ಕಳು ವಯಸ್ಸಿಗೆ ಹೊಂದಿರಬೇಕಾದ ಎತ್ತರಕ್ಕಿಂತ ಕಡಿಮೆ ಎತ್ತರ ಹೊಂದಿದ್ದಾರೆ. ಶೇಕಡ 19.8ರಷ್ಟು ಮಕ್ಕಳು ವಯಸ್ಸಿಗೆ ಹೊಂದಿರಬೇಕಾದ ತೂಕ ಮತ್ತು ಎತ್ತರಕ್ಕಿಂತ ಕಡಿಮೆ ತೂಕ ಮತ್ತು ಎತ್ತರ ಹೊಂದಿ ತೀವ್ರತರವಾದ ಅಪೌಷ್ಠಿಕತೆಯನ್ನು ಹೊಂದಿದ್ದಾರೆ ಎಂದು ಅಧ್ಯಯನವು ತಿಳಿಸುತ್ತದೆ. ಶಾಲಾಪೂರ್ವ ಅಂಗನವಾಡಿಗಳ ಸೌಲಭ್ಯಗಳ ಲಭ್ಯತೆ ಇಂದಿಗೂ ಕಳಪೆಯಾಗಿದೆ. ಒಂದು ಅಂಗನವಾಡಿ 3–6 ವಯಸ್ಸಿನ 50 ಮಕ್ಕಳು ಮತ್ತು 0–6 ವಯಸ್ಸಿನ 95 ಮಕ್ಕಳಿಗೊಂದರಂತೆ ಕಾರ್ಯ ನಿರ್ವಹಿಸುತ್ತದೆ. ಸರ್ಕಾರದ ನಿಯಮದಂತೆ ಪ್ರತಿ ಅಂಗನವಾಡಿ 25 ರಿಂದ 40 ಮಕ್ಕಳಿಗೊಂದರಂತೆ ಇರಬೇಕಾಗಿದೆ. ನೈರ್ಮಲ್ಯ ಮತ್ತು ಸ್ವಚ್ಚತೆಯ ಸೌಲಭ್ಯಗಳನ್ನು ಶಾಲೆಗಳಿಗೆ ಹೋಲಿಸಿದರೆ ಅಂಗನವಾಡಿ ಪರಿಸ್ಥಿತಿ ಶೋಚನೀಯವಾಗಿದೆ.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲು ರಾಜ್ಯ ಉಚ್ಚ ನ್ಯಾಯಾಲಯದ ಸೂಚನೆಯಂತೆ 2013–14 ನೇ ಸಾಲಿನಲ್ಲಿ ನಡೆಸಿದ ಸಮೀಕ್ಷೆಯ ಮಾಹಿತಿಯಂತೆ 1,70,525ಮಕ್ಕಳು ಶಾಲೆಯಿಂದ ಹೊರಗುಳಿದಿದ್ದು, ಗುರುತಿಸಲಾದ ಮಕ್ಕಳಲ್ಲಿ 1904 ಮಕ್ಕಳು ಮರಣ ಹೊಂದಿದ್ದು, ಉಳಿದ ಒಟ್ಟು 168621 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ ಎಂಬ ಮಾಹಿತಿಯು ತಿಳಿದು ಬರುತ್ತದೆ.  ಕಾರ್ಮಿಕ ಮಾರುಕಟ್ಟೆಗಳು ಇನ್ನೂ 14 ರಿಂದ 18 ರೊಳಗಿನ ವಯೋಮಾನವನ್ನು ಮಕ್ಕಳು ಅಥವಾ ವಯಸ್ಕರು ಎನ್ನಲಾಗದೆ ಅವರನ್ನು ಶೋಷಿಸಲಾಗುತ್ತಿದೆ.

ಸ್ವಾತಂತ್ರ್ಯ ಬಂದ 67 ವರ್ಷಗಳ ನಂತರವೂ ಮಕ್ಕಳಿಗೆ ದೊರಕಲೇಬೇಕಾದ ಸೇವಾಸೌಲಭ್ಯಗಳು ಅವರಿಗೆ ಲಭ್ಯವಾಗುವಲ್ಲಿ ಹಲವಾರು ಕಂದರಗಳಿರುವುದು ಕಂಡು ಬಂದಿದೆ. ಸಮಕಾಲೀನ ಸಮಯದಲ್ಲಿ ಬಾಲ್ಯಾವಸ್ಥೆಯ ಅಪಾಯಗಳು ತೀವ್ರತರವಾಗಿವೆ ಹಾಗೂ ದೇಶದ ಅನೇಕ ಮಕ್ಕಳು ಅತೀವ ಕಷ್ಟಕರ ಪರಿಸ್ಥಿತಿಯಲ್ಲಿದ್ದಾರೆ. ಇಂದು ಹೆಚ್ಚು ಹೆಚ್ಚು ಮಕ್ಕಳು ಅಪಾಯಕ್ಕೆ ಈಡಾಗುತ್ತಿದ್ದಾರೆ ಹಾಗೂ ಅಪಾಯದಂಚಿಗೆ ತಳ್ಳಲ್ಪಡುತ್ತಿದ್ದಾರೆ. ತಿನ್ನಲು ಆಹಾರವಿಲ್ಲದೆ, ಕನಿಷ್ಟ ಅಥವಾ ಆರೋಗ್ಯದ ನೆರವೇ ಇಲ್ಲದೆ, ಅಪಾಯಕಾರಿ ಜೀವನ ನಡೆಸುತ್ತಿದ್ದಾರೆ. ಪ್ರತಿ ದಿನವೂ ಹಸಿವಿನಿಂದ, ಅಪೌಷ್ಟಿಕತೆಯಿಂದ ಬಳಲುತ್ತಾ, ನವಜಾತ ಶಿಶುಮರಣ ಮತ್ತು ಶಿಶುಮರಣದ ದುರಂತಕ್ಕೆ ತುತ್ತಾಗುತ್ತಿದ್ದಾರೆ. ಸ್ವಲ್ಪ ದೊಡ್ಡ ವಯಸ್ಸಿನ ಮಕ್ಕಳು ಮಾನವ ಸಾಗಾಣಿಕೆಗೆ ಬಲಿಯಾಗುತ್ತಿದ್ದಾರೆ ಮತ್ತು ತಮ್ಮ ನೆಲೆಗಳಿಂದ ದೂರವಾಗಿ, ವಲಸೆ ಬಂದು ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಮಕ್ಕಳು ರಾಜ್ಯದಿಂದ ರಾಜ್ಯಕ್ಕೆ ಬಹು ದೂರ ಪ್ರಯಾಣಿಸುತ್ತಿದ್ದಾರೆ. ಕೆಲಸದ ಸ್ಥಳಕ್ಕೆ ಹೋಗುವ ಹಾದಿಯಲ್ಲಿ ಮತ್ತು ಕೆಲಸದ ಸ್ಥಳದಲ್ಲಿ ಮಕ್ಕಳು ದುರುಪಯೋಗ, ಹಿಂಸೆ ಹಾಗೂ ಸಾರಾಸಗಟಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ ಎಂಬ ಬಗ್ಗೆ ಯಾವುದೇ ಅನುಮಾನವಿಲ್ಲ. ಕೆಲಸ ಮಾಡುತ್ತಿರುವ ಮಕ್ಕಳೂ ಕೂಡ ಮಾರುಕಟ್ಟೆಯ ಕ್ರೂರ ಶಕ್ತಿಗಳಿಗೆ ಬಲಿಪಶುಗಳಾಗುತ್ತಿದ್ದಾರೆ. ಅವರಿಗೆ ಸರ್ಕಾರದ ಸೇವಾಸೌಲಭ್ಯಗಳು ದೊರೆಯುತ್ತಿಲ್ಲ. ಬಾಲ್ಯವಿವಾಹ, ಮಕ್ಕಳ ಸಾಗಣೆ ಮತ್ತು ಹೆಣ್ಣುಮಕ್ಕಳ ವಿರುದ್ಧ ತಾರತಮ್ಯ ಇವೆಲ್ಲಾ ಪ್ರಮುಖ ಸವಾಲುಗಳಾಗೇ ಉಳಿದುಕೊಂಡಿವೆ. ಎಚ್.ಐ.ವಿ. ಮತ್ತು ಏಡ್ಸ್‌ಗೆ ತುತ್ತಾಗಿರುವ ಹಾಗೂ ಸೋಂಕಿತರಾಗಿರುವ, ಸ್ವಾಭಾವಿಕ ಪ್ರಕೃತಿ ವಿಕೋಪಗಳಿಂದ, ಸಾಮಾಜಿಕ ತಲ್ಲಣಗಳಿಂದ ಸ್ಥಳ ಪಲ್ಲಟಗೊಂಡಿರುವ ಮಕ್ಕಳ ಸಂಖ್ಯೆ ಏರುತ್ತಿದೆ. ಬಾಲ್ಯಾವಸ್ಥೆಯ ಪ್ರತಿಯೊಂದು ಕೊರತೆ ಮಕ್ಕಳ ಮೇಲೆ ಗಾಢ ಪರಿಣಾಮ ಬೀರುವುದನ್ನು ನಾವು ನೋಡಿದ್ದೇವೆ. ಮೂಲಭೂತ ಅವಶ್ಯಕತೆಗಳಾದ ಪೌಷ್ಟಿಕತೆ ಮತ್ತು ಆರೋಗ್ಯ ಸೌಲಭ್ಯಗಳು ದೊರೆಯದೆ, ದೈಹಿಕ ಬೆಳವಣಿಗೆಯಿಂದ ಮಕ್ಕಳು ಕುಂಠಿತರಾಗಿ, ಅಪೌಷ್ಟಿಕರಾಗಿ, ಅಪಾಯದ ಪರಿಸ್ಥಿತಿಯಲ್ಲಿ ಜೀವನ ನಡೆಸುತ್ತಾರೆ. ಶಿಕ್ಷಣದಿಂದ ವಂಚಿತರಾದ ಅವರಿಗೆ ಆತ್ಮವಿಶ್ವಾಸ ಮತ್ತು ಆತ್ಮಗೌರವದ ಕೊರತೆ ಕಾಡುತ್ತದೆ. ಏಕತಾನತೆಯ, ಸಾಮಾಜಿಕ ಚಲನೆಯಿಲ್ಲದ ಕೆಲಸಗಳಲ್ಲಿ ತೊಡಗಿ, ಆತ್ಮಗೌರವ ಬೆಳೆಸಿಕೊಳ್ಳುವ ಅವಕಾಶಗಳಿಲ್ಲದೆ, ಅಸಂಘಟಿತ ಕ್ಷೇತ್ರದ ಕಾರ್ಮಿಕ ವರ್ತುಲದಲ್ಲಿ ಸಿಲುಕುತ್ತಾರೆ. ಅವರು ಕೇವಲ ತಾತ್ಕಾಲಿಕ ಆಧಾರದ ಮೇಲೆ ಅಥವಾ ದಿನಗೂಲಿ ಕೆಲಸ, ವಲಸೆ ಬಂದ ಕಾರ್ಮಿಕರಾಗಿ ಅಥವಾ ಜೀತದಾಳುಗಳಾಗಿ ಮಾರುಕಟ್ಟೆಯಲ್ಲಿ ಮತ್ತು ಉದ್ಯಮದಲ್ಲಿ ಅವರಿಗೆ ಅವಕಾಶಗಳು ಸೀಮಿತವಾಗುತ್ತವೆ.

ಈ ಹಿನ್ನೆಲೆಯಲ್ಲಿ, ಮಕ್ಕಳಿಗಾಗಿ ಇರುವ ಸೇವಾ ಸೌಲಭ್ಯಗಳ ಹಿಂದಿನ ಪ್ರಮುಖ ಉದ್ದೇಶಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಹಕ್ಕು ಆಧಾರಿತ ದೃಷ್ಟಿಕೋನಕ್ಕೆ ಬದ್ಧರಾಗುವ ಅವಶ್ಯಕತೆ ಬಹಳ ಇದೆ. ಇತ್ತೀಚಿನ ಕಾನೂನುಗಳು – ಶಿಕ್ಷಣ ಹಕ್ಕು ಮತ್ತು ಲೈಂಗಿಕ ಶೋಷಣೆಯ ವಿರುದ್ಧ ಮಕ್ಕಳಿಗೆ ರಕ್ಷಣೆಯ ಹಕ್ಕು – ಇವೆರಡೂ ಮಕ್ಕಳ ಕೇಂದ್ರೀಕೃತವಾಗಿದ್ದು, ಮಕ್ಕಳ ಹಕ್ಕುಗಳನ್ನು ಸ್ಪಷ್ಟವಾಗಿ ಹೇಳುತ್ತವೆ. ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ (ಐಸಿಡಿಎಸ್) ಮತ್ತು ಸಮಗ್ರ ಮಕ್ಕಳ ರಕ್ಷಣಾ ಯೋಜನೆ (ಐಸಿಪಿಎಸ್) ಯಂತಹ ನೀತಿಗಳೂ ಕೂಡ ವಿಕೇಂದ್ರೀಕರಣ ಹಾಗೂ ಸಮುದಾಯ ಮತ್ತು ನಾಗರಿಕ ಸಮಾಜವನ್ನು ಸರ್ಕಾರದ ಜೊತೆ ಸಮಪಾಲುದಾರರನ್ನಾಗಿ ತೊಡಗಿಸಿಕೊಳ್ಳುವುದು – ಇವೆರಡೂ, ಮಕ್ಕಳ ಹಕ್ಕುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದರಲ್ಲಿ ಪ್ರಮುಖ ಅಂಶಗಳೆಂದು ತೋರಿಸಿಕೊಟ್ಟಿವೆ.

ಭಾರತದ ಸಂವಿಧಾನದಲ್ಲಿ ಮಕ್ಕಳಿಗಿರುವ ಅವಕಾಶಗಳು

ಭಾರತ ಸಂವಿಧಾನದ ರಚನಾಕಾರರು ದೇಶದ ಪ್ರಜಾಪ್ರಭುತ್ವದ ಅಡಿಗಲ್ಲುಗಳನ್ನು ನೆಡುವಲ್ಲಿ ಸುರಕ್ಷಿತ ಬಾಲ್ಯ ಹಾಗೂ ಮಕ್ಕಳ ಹಕ್ಕುಗಳ ಸಂರಕ್ಷಣೆ – ಇವೆರಡೂ ಹೇಗೆ ಅತಿ ಮುಖ್ಯ ಅಂಶಗಳಾಗಬಹುದೆಂದು ಗುರುತಿಸಿದ್ದರು. ಆದ್ದರಿಂದಲೇ ಸಂವಿಧಾನದ ರಾಜ್ಯ ಆಡಳಿತ ನಿರ್ದೇಶಕ ತತ್ವಗಳ ಪರಿಚ್ಛೇದ 39(ಎಫ್) ಹೀಗೆ ಹೇಳುತ್ತದೆ: “ಮಕ್ಕಳು ಆರೋಗ್ಯ ವಂತರಾಗಿ ಮತ್ತು ಸ್ವತಂತ್ರ ಹಾಗೂ ಗೌರವಯುತವಾದ

ಪರಿಸ್ಥಿತಿಯಲ್ಲಿ ಬೆಳೆಯಲು ಅವಕಾಶಗಳು ಮತ್ತು ಸೌಕರ್ಯಗಳನ್ನು ಕಲ್ಪಿಸಲಾಗುವುದು ಹಾಗೂ ಮಕ್ಕಳು ಮತ್ತು ಯುವಕರನ್ನು ದೌರ್ಜನ್ಯ ಮತ್ತು ನೈತಿಕ ಹಾಗೂ ಆರ್ಥಿಕ ಶೋಷಣೆಯಿಂದ ರಕ್ಷಿಸಲಾಗುವುದು.''

ಪರಿಚ್ಛೇದ ಮುಂದೆ ಹೋಗಿ, ಸಾಮಾಜಿಕ ನ್ಯಾಯದ ಮೌಲ್ಯಗಳನ್ನು ಒತ್ತಿ ಹೇಳುತ್ತಾ, ``ಉದ್ಯೋಗಿಗಳು, ಪುರುಷರು, ಮಹಿಳೆಯರ ಆರೋಗ್ಯ ಮತ್ತು ಸಾಮರ್ಥ್ಯ ಹಾಗೂ ಮಕ್ಕಳ ಎಳೆಯ ವಯಸ್ಸನ್ನು ದುರುಪಯೋಗ ಪಡಿಸಿಕೊಳ್ಳಬಾರದು ಹಾಗೂ ಯಾವ ಪ್ರಜೆಯೂ ಆರ್ಥಿಕ ಅನಿವಾರ್ಯತೆ ಯಿಂದಾಗಿ ಅವರ ವಯಸ್ಸು ಮತ್ತು ಸಾಮರ್ಥ್ಯಕ್ಕೆ ಹೊಂದದ ಕೆಲಸಗಳಲ್ಲಿ ತೊಡಗಬಾರದು'' ಎಂದು ಹೇಳುತ್ತದೆ. ಇದಲ್ಲದೆ, ಶಿಕ್ಷಣದ ಹಕ್ಕಿನ ಮಹತ್ವವನ್ನು ಮನಗಂಡು, ಸಂವಿಧಾನದ ಪರಿಚ್ಛೇದ 45 (ಈಗ ತಿದ್ದುಪಡಿಯಾಗಿದೆ) ತನ್ನ ಬದ್ಧತೆಯನ್ನು ಹೀಗೆ ಸಾರುತ್ತದೆ: ``ಸಂವಿಧಾನ ರಚಿತವಾದ 10 ವರ್ಷಗಳೊಳಗೆ ಎಲ್ಲ ಮಕ್ಕಳಿಗೆ ಅವರು 14 ವರ್ಷ ಪೂರ್ಣಗೊಳಿಸುವವರೆಗೆ ಅವರಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಲು ಸರ್ಕಾರವು ಪ್ರಯತ್ನಪಡುತ್ತದೆ.'' ವಾಸ್ತವವಾಗಿ, ನಿಗದಿತ ಸಮಯದ ಬದ್ಧತೆಯ ಬಗ್ಗೆ ಮಾತನಾಡುವ, ಸಂವಿಧಾನದಲ್ಲಿರುವ ಪರಿಚ್ಛೇದ ಇದೊಂದೇ.

ಹಕ್ಕುಗಳ ಆಧಾರಿತ ದೃಷ್ಟಿಕೋನವು ಸಾರ್ವತ್ರಿಕವಾದರೂ, ಸಂವಿಧಾನದ ರಚನಕಾರರು ಅದು ದೃಢವಾದ ಕ್ರಿಯೆಗಳಾಗಿ ಪರಿವರ್ತನೆಯಾಗುವ ಅಗತ್ಯವನ್ನು ಗುರುತಿಸಿದ್ದರು. ಹೀಗಾಗಿ ಪರಿಚ್ಛೇದ 46ರಲ್ಲಿ ``ದುರ್ಬಲ ವರ್ಗಗಳ ಜನರ, ಅದರಲ್ಲೂ ಪರಿಶಿಷ್ಟ ಜಾತಿ, ಪಂಗಡಗಳ ಶೈಕ್ಷಣಿಕ ಮತ್ತು ಆರ್ಥಿಕ ಆಸಕ್ತಿಗಳನ್ನು ಪ್ರೋತ್ಸಾಹಿಸಲು ಸರ್ಕಾರ ವಿಶೇಷ ಗಮನಕೊಟ್ಟು, ಅವರನ್ನು ಸಾಮಾಜಿಕ ಅನ್ಯಾಯ ಹಾಗೂ ಎಲ್ಲ ರೀತಿಯ ಶೋಷಣೆಯ ವಿರುದ್ಧ ರಕ್ಷಿಸಬೇಕು'' ಎಂದು ಹೇಳಿದೆ.

ಸಾಧ್ಯತೆಗಳು

ಮಕ್ಕಳಿಗಾಗಿ ನೀತಿ ನಿರೂಪಣೆ ಮಾಡುವಾಗ ಮತ್ತು ಸೇವೆಗಳನ್ನು ಕಲ್ಪಿಸುವಾಗ, ಮಕ್ಕಳಿಗೆ ನ್ಯಾಯ ವ್ಯವಸ್ಥೆಯ ಜಾರಿ ಮಾಡುವಾಗ ಮತ್ತು ಮಕ್ಕಳ ಪರವಾದ ಕಾಯಿದೆಗಳನ್ನು ಮಾಡುವಾಗ ಅನುಸರಿಸಬೇಕಾದ ಕೆಲವು ಮೂಲ ನಿಯಮಗಳನ್ನು ಅಳವಡಿಸಬೇಕಿದೆ. ಎಲ್ಲೋ ಕೇಂದ್ರದಲ್ಲಿ ರೂಪಿತವಾಗುವ ಮತ್ತು ನಿಗದಿತವಾದ ರೀತಿಯಲ್ಲೇ ಹಣಕಾಸಿನ ಖರ್ಚುವೆಚ್ಚಗಳಾಗ ಬೇಕೆನ್ನುವ ಎಷ್ಟೋ ಜಿಗುಟು ಪರಿಹಾರ ಯೋಜನೆಗಳು ಸಮರ್ಪಕವಾಗಿರುವುದಿಲ್ಲ. ಎಲ್ಲ ಪರಿಹಾರ ಕ್ರಿಯೆಗಳು ವ್ಯವಸ್ಥಿತವಾಗಿದ್ದು, ಯೋಜಿತವಾದ ರೀತಿಯಲ್ಲಿ ಸಾಗಬೇಕೆ ಹೊರತು, ತೀರಾ ತಾತ್ಕಾಲಿಕವಾದ ಕಾರ್ಯಕ್ರಮಗಳಾಗಿರಬಾರದು. ಇಷ್ಟೇ ಅಲ್ಲದೆ, ಆರೋಗ್ಯ, ಪೌಷ್ಟಿಕಾಂಶಗಳು, ಶಿಕ್ಷಣವೇ ಮೊದಲಾದ ಕೆಲವು ಸೇವೆಗಳು ಹಕ್ಕುಗಳಾಗಿರುವುದರಿಂದ, ಅವುಗಳಿಗೆ ಸಂಬಂಧಿಸಿದ ಇಲಾಖೆಗಳು ಒಂಟಿಯಾಗಿ ಅಥವಾ ವಿರುದ್ಧ ದಿಕ್ಕುಗಳಲ್ಲಿ ಕೆಲಸ ಮಾಡದೆ, ಒಗ್ಗೂಡಿದ ಯೋಜನೆಗಳನ್ನು ಕನಿಷ್ಠ ಪಕ್ಷ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ತಯಾರಿಸಿ ಸೇವೆಗಳನ್ನು ಒದಗಿಸಬೇಕು.

ಅಪರಾಧಗಳಿಗೆ ಗುರಿಯಾದ ಮಕ್ಕಳು ಮತ್ತು ಮಕ್ಕಳೇ ಸಾಕ್ಷಿಗಳಾಗಿರುವವರಿಗೆ ನ್ಯಾಯ ಒದಗಿಸುವ ಪ್ರಕ್ರಿಯೆಯಲ್ಲೂ ವಿಶೇಷವಾದ ಕ್ರಮಗಳನ್ನು ಪ್ರತಿಯೊಂದು ಹಂತದಲ್ಲೂ ಕೈಗೊಳ್ಳುವ ಅವಶ್ಯಕತೆಯಿದೆ. ಅಂದರೆ, ಕಾನೂನಿನೊಡನೆ ಸಂಪರ್ಕದಲ್ಲಿರುವ ಮಕ್ಕಳು ಮತ್ತು ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳೊಡನೆ ಹೇಗೆ ವರ್ತಿಸಬೇಕು ಮತ್ತು ವ್ಯವಹರಿಸಬೇಕು ಎನ್ನುವುದು. ಇದಕ್ಕಾಗಿ ಮಕ್ಕಳ ನ್ಯಾಯ/ಕಾನೂನು ವ್ಯವಸ್ಥೆ, ಮಕ್ಕಳ ದೃಷ್ಟಿಕೋನದ ದಂಡ ಸಂಹಿತೆ, ಮಕ್ಕಳ ಹಕ್ಕುಗಳನ್ನು ಕುರಿತು ಸಮರ್ಪಕವಾಗಿ ತರಬೇತಿ ಹೊಂದಿದ ನುರಿತ ನ್ಯಾಯಾಧೀಶರು ಮತ್ತು ಮಾನವೀಯ 'ಮಕ್ಕಳ ಸ್ನೇಹೀ' ವಾತಾವರಣ ಮತ್ತು ಪರಿಸ್ಥಿತಿಯಲ್ಲಿ ನ್ಯಾಯ ಅಪೇಕ್ಷಿಸುವ ದಿಶೆಯಲ್ಲಿ ಮಕ್ಕಳಿಗೆ ಸಾಕಷ್ಟು ಸಮಯ ಮತ್ತು ಅವಕಾಶಗಳನ್ನು ಸೃಷ್ಟಿಸುವುದು ಅವಶ್ಯಕವಾಗುತ್ತದೆ. ಇಂತಹ ನ್ಯಾಯ ವ್ಯವಸ್ಥೆಯ ಎಲ್ಲ ಪ್ರಕ್ರಿಯೆಗಳಲ್ಲಿ ಮಕ್ಕಳ ಸುರಕ್ಷತೆಗೆ ಆದ್ಯ ಗಮನವಿದ್ದು, ಮಕ್ಕಳ ಗೌರವ, ಖಾಸಗಿತನಕ್ಕೆ ಯಾವುದೇ ಧಕ್ಕೆ ಆಗದಂತೆ ಹಾಗೂ ಮಕ್ಕಳು ಮತ್ತೆ ತೊಂದರೆಗೆ ಅಪರಾಧಕ್ಕೆ ಸಿಲುಕದಂತೆ ರಕ್ಷಿಸುವುದು ಮುಖ್ಯವಾಗುತ್ತದೆ. ಮಕ್ಕಳ ಕೇಂದ್ರಿತ ನ್ಯಾಯವ್ಯವಸ್ಥೆ ಮಕ್ಕಳ ಸುಧಾರಣೆ ಮತ್ತು ನಿಯಂತ್ರಣದ ನ್ಯಾಯ ವ್ಯವಸ್ಥೆಯ ಅವಕಾಶವನ್ನೂ ನೀಡಬೇಕು.

ಮಕ್ಕಳ ಹಕ್ಕುಗಳನ್ನು ರಕ್ಷಿಸುವ ಎಲ್ಲ ಕಾಯಿದೆಗಳು ಮಕ್ಕಳ ಹಕ್ಕುಗಳನ್ನು ಕುರಿತು ನಿರ್ದಿಷ್ಟವಾದ ಮತ್ತು ಯಾವುದೇ ಗೊಂದಲಗಳಿಗೆ ಅವಕಾಶವಿಲ್ಲದಂತಹ ನಿಲುವುಗಳನ್ನು ತೆಗೆದುಕೊಳ್ಳಬೇಕು ಮತ್ತು ಮಕ್ಕಳಿಗೆ ಅತ್ಯಾವಶ್ಯಕವಾದ ಸೇವೆಗಳನ್ನು ಒದಗಿಸಲು ಬೇಕಾದ ವ್ಯವಸ್ಥೆಗಳು, ಸಾಂಸ್ಥಿಕ ಸೌಲಭ್ಯಗಳು ಮತ್ತು ಪ್ರಕ್ರಿಯೆಗಳನ್ನು ನಿರ್ಮಿಸುವುದಕ್ಕೆ ಸರ್ಕಾರಗಳು ಬದ್ಧವಾಗಿರಬೇಕು. 18 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಎಲ್ಲ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಸಮತೆ ಮತ್ತು ಸಾಮಾಜಿಕ ನ್ಯಾಯವೆಂದು ಮಾತ್ರ ನಿಲ್ಲದೆ ಎಲ್ಲ ಕಾಯಿದೆಗಳು 'ಸಮಗ್ರತೆ'ಯ ದೃಷ್ಟಿಕೋನಕ್ಕೆ ಬದ್ಧವಾಗಿರಬೇಕು. ಸೌಲಭ್ಯಗಳಿಂದ ವಂಚಿತರಾದ ಮಕ್ಕಳಿಗೆ ಅವುಗಳು ತಲುಪಲು ವಿಶೇಷ ಅವಕಾಶಗಳನ್ನು, ಹಕ್ಕುಗಳು ಮತ್ತು ಸಮಗ್ರತೆಯ ಚೌಕಟ್ಟಿನಲ್ಲೇ ಕಡ್ಡಾಯವಾಗಿ ಎಲ್ಲ ಕಾಯಿದೆಗಳಲ್ಲಿ ಅಳವಡಿಸಬೇಕು.

ದೇಶದ ಸರ್ವೋಚ್ಚ ನ್ಯಾಯಾಲಯವು, ಹಸಿವನ್ನು ತೊಡೆಯಲು ಮತ್ತು ಅಪೌಷ್ಟಿಕತೆಯನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತು ನೀಡಿದ ತಾತ್ಕಾಲಿಕ ನಿರ್ದೇಶನ ಇದ್ದಕ್ಕಿದ್ದ ಹಾಗೆ ಎಲ್ಲರಲ್ಲೂ ಎಲ್ಲ ಸೇವೆಗಳನ್ನು ಸಾರ್ವತ್ರೀಕರಿಸುವ ಮತ್ತು ತುರ್ತಾಗಿ ಅವುಗಳನ್ನು ನೀಡುವ ಮನೋಭಾವವನ್ನು ತರಿಸಿದೆ. ಈಗ ಹೊಸ ರೀತಿಯಲ್ಲಿ ಪುನರ್ನಿರ್ಮಾಣಗೊಂಡಿರುವ ಸಮಗ್ರ ಬಾಲವಿಕಾಸ

ಯೋಜನೆ (ಐ.ಸಿ.ಡಿ.ಎಸ್.) ಕಾರ್ಯಕ್ರಮಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿರುವ ನಿರ್ದೇಶನಗಳನ್ನು ಅಳವಡಿಸಿ ಕೊಂಡದ್ದೇ ಆದಲ್ಲಿ, ಪ್ರತಿಯೊಂದು ಜನವಸತಿಯಲ್ಲಿ ಕನಿಷ್ಟ ಒಂದೊಂದು ಅಂಗನವಾಡಿ ಬೇಕೆಂದು ಬೇಡಿಕೆ ಸಲ್ಲಿಸಿದ ಕೂಡಲೇ ಅಂಗನವಾಡಿಗಳ ಸ್ಥಾಪನೆ ಜಾರಿಗೆ ಬರುತ್ತವೆ ಎಂದು ಆಶಿಸಲಾಗಿದೆ. ಇದರೊಂದಿಗೆ ಐ.ಸಿ.ಡಿ.ಎಸ್. ಯೋಜನೆ ಇನ್ನಷ್ಟು  ವಿಕೇಂದ್ರೀಕರಣಗೊಂಡು, ಅಂಗನವಾಡಿಗಳಿಗೆ ಇನ್ನಷ್ಟು ಸಮರ್ಪಕವಾದ ಕಟ್ಟಡವೇ ಮೊದಲಾದ ವ್ಯವಸ್ಥೆಗಳು, ಸಮುದಾಯಕ್ಕೆ ಇನ್ನಷ್ಟು ಮಹತ್ವ ಕೊಟ್ಟು, ಸ್ಥಳೀಯ ಸರ್ಕಾರಗಳಿಗೂ ಪ್ರಾಮುಖ್ಯತೆ ಕೊಡುತ್ತದೆ ಎಂದು ಭಾವಿಸಲಾಗಿದೆ. ಹೀಗೆ ಆದಲ್ಲಿ, ಈಗಿರುವ ಹಸಿವು ಮತ್ತು ಅಪೌಷ್ಟಿಕತೆಯನ್ನು ತಡೆಗಟ್ಟಿ, ರಾಜ್ಯದ ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕತೆಯ ಕೊರತೆಯನ್ನು ಸರಿಪಡಿಸಬಹುದು.

ಸಂಕಷ್ಟ ಪರಿಸ್ಥಿತಿಗಳಲ್ಲಿರುವ ಎಲ್ಲ ಮಕ್ಕಳಿಗೆ ರಕ್ಷಣೆಯನ್ನು ಒದಗಿಸುವುದು ಮತ್ತು ದುರುಪಯೋಗ, ತಿರಸ್ಕಾರ, ಶೋಷಣೆ, ಪರಿತ್ಯಕ್ತಗೊಳ್ಳುವುದು ಹಾಗೂ ಕುಟುಂಬಗಳಿಂದ ದೂರವಾಗುವ ಮಕ್ಕಳ ಪರಿಸ್ಥಿತಿಗಳನ್ನು ಆದಷ್ಟೂ ಕಡಿಮೆ ಮಾಡುವುದು. ಮಕ್ಕಳು ತೊಂದರೆ ಮತ್ತು ಅಪಾಯಗಳಿಗೆ ಸಿಲುಕದಂತೆ ತಡೆಯುವುದು. ರಾಜ್ಯದ ರಾಜಧಾನಿಯಿಂದ ಹಿಡಿದು ಪ್ರತಿಯೊಂದು ಹಳ್ಳಿಯವರೆಗೆ ಸಾಂಸ್ಥಿಕ ವ್ಯವಸ್ಥೆಗಳು ಜಾರಿಯಾಗಬೇಕು, ಮಕ್ಕಳ ನೆರವಿಗಾಗಿ ಮಕ್ಕಳ ನ್ಯಾಯ ವ್ಯವಸ್ಥೆಯಲ್ಲದೆ, ವಿವಿಧ ಇಲಾಖೆಗಳ ಕಾರ್ಯಕ್ರಮಗಳು ಮತ್ತು ಅವುಗಳ ಸೇವೆಗಳನ್ನು ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಸಂಯೋಜಿಸಬೇಕಾಗುತ್ತದೆ. ಮಕ್ಕಳ ಸಮಗ್ರ ರಕ್ಷಣಾ ಯೋಜನೆಗಳು ಸಂಕಷ್ಟದಲ್ಲಿರಬಹುದಾದ ಪ್ರತಿಯೊಂದು ಮಗುವಿನ ಜಾಡನ್ನು ಹಿಡಿದು ಅನುಸರಿಸರಿಸಬೇಕು, ಇದರಿಂದ ಯಾವ ಮಕ್ಕಳೂ ಬಾಲಕಾರ್ಮಿಕರಾಗುವುದಿಲ್ಲ ಮತ್ತು ಮಕ್ಕಳ ಮಾರಾಟ ಸಾಗಣೆ ಕೊನೆಗೊಳ್ಳುತ್ತದೆ. ಈಗ ನಮ್ಮೆದುರು ಇರುವ ಸವಾಲು ಎಂದರೆ ಚಾಲ್ತಿಯಲ್ಲಿರುವ ಸೇವೆಗಳು ಹಳ್ಳಿಹಳ್ಳಿಗಳ ಮಟ್ಟಕ್ಕೆ ಆಳವಾಗಿ ಬೇರೂರಬೇಕು ಮತ್ತು ಮಕ್ಕಳಿಗೆ ಲಭ್ಯವಿರುವ ಸೇವೆಗಳು, ಸೌಲಭ್ಯಗಳನ್ನು ಕುರಿತು ಜನರಲ್ಲಿ ಸಮಗ್ರವಾಗಿ ಅರಿವು ಮೂಡಿಸಲೇಬೇಕು. ಕಳೆದ ಎರಡು ದಶಕದಲ್ಲಿ ಮಕ್ಕಳನ್ನು ಕುರಿತ ದೃಷ್ಟಿಕೋನವು ದಾನಧರ್ಮ ಮಾಡುವ ವಿಧಾನದಿಂದ ಮಕ್ಕಳ ಹಕ್ಕುಗಳನ್ನು ಖಾತರಿಗೊಳಿಸಿ ನ್ಯಾಯ ಒದಗಿಸುವುದರತ್ತ ಬದಲಾಗಿದೆ ಎಂದು ಹೇಳಬಹುದು. ಮಕ್ಕಳ ಹಕ್ಕುಗಳನ್ನು ಕುರಿತು ಸದ್ಯ ಚಾಲ್ತಿಯಲ್ಲಿರುವ ಕಾಯಿದೆಗಳು, ನೀತಿಗಳನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲು ಈಗ ಬೇಕಿರುವುದು ಎಲ್ಲರಿಂದ, ಎಲ್ಲೆಡೆಯಿಂದ ಬೆಂಬಲ ಮತ್ತು ಸಶಕ್ತಗೊಳಿಸುವ ವಾತಾವರಣ, ಪ್ರಸ್ತುತ ಮಕ್ಕಳ ದಿನಾಚರಣೆಯ ಈ ಸಂದರ್ಭದಲ್ಲಿ ಮಕ್ಕಳ ಚಿಂತನೆ ಅಭಿವ್ಯಕ್ತಿ, ಸಂಸ್ಕೃತಿ, ಧರ್ಮ, ಅರಿವು ಮೊದಲಾದವುಗಳ ಕುರಿತಂತೆ ಪೂರ್ಣ ಸ್ವಾತಂತ್ರ್ಯ ಹಾಗೂ ಯಾವುದೇ ಮಗುವನ್ನು ಆರ್ಥಿಕವಾಗಿ ಶೋಷಿಸುವುದು, ತಾರತಮ್ಯ ತೋರುವುದು, ಲೈಂಗೀಕ ದೌರ್ಜನ್ಯ ಮಾಡಬಾರದು ಮತ್ತು ಎಲ್ಲಾ ಮಕ್ಕಳು ಸಮಾನರು ಪ್ರತಿಯೊಂದರಲ್ಲೂ ಹುಡುಗರಿಗೂ ಇರುವಂತೆ ಎಲ್ಲ ಹಕ್ಕುಗಳು ಹುಡುಗಿಯರಿಗೂ ಸಮಾನವಾಗಿದೆ ಎನ್ನುವುದಾಗಬೇಕಿದೆ ಈ ಹಿನ್ನಲೆಯಲ್ಲಿ ಮಕ್ಕಳೆಲ್ಲರಿಗೂ ಶುಭಕೋರೋಣ–ಶುಭವಾಗಲೀ